# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 654 (784) |
| ಸದಸ್ಯರ ಹೆಸರು | : | ಶ್ರೀ. ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 21.08.2026 |
| ಉತ್ತರಿಸುವ ಸಚಿವರು | : | ಮಾನ್ಯ ಜಲಸಂಪನ್ಮೂಲ ಸಚಿವರು |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಉತ್ತರ ಕರ್ನಾಟಕ ಭಾಗದ ಪ್ರಮುಖ ನೀರಾವರಿ ಯೋಜನೆಗಳಾದ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 (UKP-3) ಮಹಾದಾಯಿ (ಕಳಸಾ-ಬಂಡೂರಿ) ಜಲಾನಯನ ಯೋಜನೆ ಮತ್ತು ಮಲಪ್ರಭಾ-ಘಟಪ್ರಭಾ ನಾಲಾ ಆಧುನೀಕರಣ ಯೋಜನೆಗಳು ಪ್ರಸ್ತುತ ಯಾವ ಹಂತದಲ್ಲಿವೆ; (ಯೋಜನೆವಾರು ಸಮಗ್ರ ವಿವರ ನೀಡುವುದು); | **(1) ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 (UKP-3):**<br>ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣ-2ರ ಅಂತಿಮ ತೀರ್ಪಿನಲ್ಲಿ ರಾಜ್ಯಕ್ಕೆ ಹಂಚಿಕೆಯಾದ ಒಟ್ಟಾರೆ 173 ಟಿ.ಎಂ.ಸಿ. (ನದಿ ಪಾತ್ರದಡಿ ನೈಸರ್ಗಿಕ ಹರಿವು 7 ಟಿ.ಎಂ.ಸಿ ಒಳಗೊಂಡು) ಪೈಕಿ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ಯೋಜನೆಗೆ 130 ಟಿ.ಎಂ.ಸಿ. ಹಂಚಿಕೆಯಾಗಿರುತ್ತದೆ. ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣ-2 ಅಂತಿಮ ತೀರ್ಪು ಕೇಂದ್ರ ಸರ್ಕಾರದಿಂದ ಗೆಜೆಟ್ ಪ್ರಕಟಣೆ ಆಗಬೇಕಾಗಿರುತ್ತದೆ.<br><br>ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ಯೋಜನೆಗೆ ಹಂಚಿಕೆಯಾದ 130 ಟಿ.ಎಂ.ಸಿ. ನೀರಿನ ಬಳಕೆಗಾಗಿ ಆಲಮಟ್ಟಿ ಜಲಾಶಯದ ನೀರಿನ ಸಂಗ್ರಹಣೆಯನ್ನು RL 519.60 mtr ದಿಂದ RL 524.256 mtr. ವರೆಗೆ ಎತ್ತರಿಸುವುದು ಒಳಗೊಂಡಿರುತ್ತದೆ.<br><br>ಅಲ್ಲದೇ 9 ಉಪ ಯೋಜನೆಗಳ ಒಳಗೊಂಡಿದ್ದು, ಮುಳವಾಡ, ಚಿಮ್ಮಲಗಿ, ಹೇರಕಲ್, ಮಲ್ಲಾಬಾದ, ಕೊಪ್ಪಳ ಏತ ನೀರಾವರಿ, ಇಂಡಿ ಹಾಗೂ ರಾಂಪೂರ ಏತ ನೀರಾವರಿ ವಿಸ್ತರಣೆ, ನಾರಾಯಣಪೂರ ಬಲದಂಡೆ ಕಾಲುವೆ ವಿಸ್ತರಣೆ ಹಾಗೂ ಭೀಮಾ ಫ್ಲಾಂಕ ಉಪ-ಯೋಜನೆಗಳ ಅನುಷ್ಠಾನದೊಂದಿಗೆ ಉತ್ತರ ಕರ್ನಾಟಕದ ವಿಜಯಪೂರ, ಬಾಗಲಕೋಟೆ, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ ಹಾಗೂ ಗದಗ ಜಿಲ್ಲೆಗಳಡಿ ಒಟ್ಟಾರೆ 5.94 ಲಕ್ಷ ಹೆಕ್ಟೇರ್ (14.67 ಲಕ್ಷ ಎಕರೆ) ಅಚ್ಚುಕಟ್ಟು ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸುವುದಾಗಿರುತ್ತದೆ.<br><br>ಕೃಷ್ಣಾ ಮೇಲ್ದಂಡೆ ಯೋಜನೆ ಹಂತ- 3ರಡಿಯಲ್ಲಿ ಮುಳುಗಡೆ ಬಾಧಿತವಾದ 20 ಭಾದಿತ ಗ್ರಾಮಗಳಿಗೆ ಪರ್ಯಾಯವಾಗಿ ಅಗತ್ಯ ಮೂಲಭೂತ ಸೌಕರ್ಯ ಒದಗಿಸಿ 24 ಪುನರ್ವಸತಿ ಕೇಂದ್ರಗಳನ್ನು ನಿರ್ಮಿಸಲು ಯೋಜಿಸಲಾಗಿರುತ್ತದೆ. ಈ ಪೈಕಿ ಹೊಸ ಭೂಸ್ವಾಧೀನದ ನಿಯಮಾವಳಿಯಂತೆ 08 ಪುನರ್ವಸತಿ ಕೇಂದ್ರಗಳಲ್ಲಿ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. 02 ಪುನರ್ವಸತಿ ಕೇಂದ್ರಗಳಾದ ಕುಂದರಗಿ ಹಾಗೂ ಬಾವಲತ್ತಿಗಳಿಗಾಗಿ ಅವಶ್ಯವಿರುವ ಜಮೀನುಗಳ ಐತೀರ್ಪು ನ್ಯಾಯಾಲಯದಲ್ಲಿ ಆಸಿಂಧು ಆಗಿ ಆದೇಶವಾಗಿರುತ್ತದೆ. ಬಾಕಿ ಉಳಿದ 13 ಪುನರ್ವಸತಿ ಕೇಂದ್ರಗಳಿಗೆ ಜಮೀನುಗಳ ಭೂಸ್ವಾಧೀನ ಪ್ರಕ್ರಿಯೆಯು ವಿವಿಧ ಹಂತಗಳಲ್ಲಿರುತ್ತವೆ. 1 ಗದ್ದನಕೇರಿ ಗ್ರಾಮದ ಸ್ವಾಧೀನದ ಕುರಿತು ತಾಂತ್ರಿಕವಾಗಿ ಪರಿಶೀಲಿಸಿ ತೀರ್ಮಾನಿಸಬೇಕಾಗಿದೆ.<br><br>ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರ ಯೋಜನೆಗೆ ದಿನಾಂಕ:16.09.2025ರ ವಿಶೇಷ ಸಚಿವ ಸಂಪುಟ ಸಭೆಯ ನಿರ್ಣಯದಂತೆ, ದಿನಾಂಕ:09.10.2025ರ ಆದೇಶದಲ್ಲಿ ಮುಳುಗಡೆ ಜಮೀನಿನ ಎಕರೆಗೆ (a) ಖುಷ್ಕಿ ಭೂಮಿಗೆ (Dry Land) ರೂ.30.00 ಲಕ್ಷ (b) ತರಿ ಭೂಮಿಗೆ (WetLand) |
| ಆ) | ಕಳೆದ ಮೂರು ವರ್ಷಗಳಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರ ಅಡಿಯಲ್ಲಿ ಭೂಸ್ವಾಧೀನ ಪ್ರಕ್ರಿಯೆ, ಸಂತ್ರಸ್ತರ ಪುನರ್ವಸತಿ ಮತ್ತು ಪುನರ್ ನಿರ್ಮಾಣ (R&R) ಕಾರ್ಯಗಳಿಗಾಗಿ ಬಿಡುಗಡೆಯಾದ ಮತ್ತು ವೆಚ್ಚವಾದ ಅನುದಾನ ಎಷ್ಟು; ಈ ಯೋಜನೆಯನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಲು ಸರ್ಕಾರ ನಿಗದಿಪಡಿಸಿಕೊಂಡಿರುವ ಕಾಲ ಮಿತಿ ಏನು; | |
| ಇ) | ಮಹಾದಾಯಿ (ಕಳಸಾ-ಬಂಡೂರಿ) ನಾಲಾ ಯೋಜನೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಪರಿಸರ ಹಾಗೂ ವನ್ಯಜೀವಿ ಮಂಡಳಿಯ ಅನುಮತಿ ಪಡೆಯಲು ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಕಾಮಗಾರಿಗಳು ವಿಳಂಬವಾಗುತ್ತಿರುವುದಕ್ಕೆ ಪ್ರಮುಖ ಕಾರಣಗಳೇನು; | |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| | | ರೂ.40.00 ಲಕ್ಷ ಮತ್ತು ಕಾಲುವೆ ಜಮೀನುಗಳ ಎಕರೆಗೆ (a) ಖುಷ್ಕಿ ಭೂಮಿಗೆ (Dry Land) ರೂ.25.00 ಲಕ್ಷ ಮತ್ತು (b) ತರಿ ಭೂಮಿಗೆ (WetLand) ರೂ.30.00 ಲಕ್ಷ ಒಪ್ಪಂದದ ಐತೀರ್ಪು ದರಗಳನ್ನು ನಿಗದಿಪಡಿಸಿ ಆದೇಶಿಸಲಾಗಿರುತ್ತದೆ.<br><br>ಸದರಿ ಆದೇಶದಂತೆ ಆಲಮಟ್ಟಿ ಹಿನ್ನೀರಿನಲ್ಲಿ ಮುಳುಗಡೆ ಹೊಂದಲಿರುವ ಗ್ರಾಮಗಳಿಗೆ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಲ್ಪಿಸುವ ಬದಲಾಗಿ ಪುನರ್ವಸತಿ ಮತ್ತು ಪುನರ್ ನಿರ್ಮಾಣದ ಪರ್ಯಾಯ ನೀತಿಯನ್ನು ರೂಪಿಸುವ ಕುರಿತು ಪ್ರಕ್ರಿಯೆ ಜಾರಿಯಲ್ಲಿದೆ.<br><br>ಕಳೆದ ಮೂರು ವರ್ಷಗಳಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರ ಅಡಿಯಲ್ಲಿ ಭೂಸ್ವಾಧೀನ ಪ್ರಕ್ರಿಯೆ. ಸಂತ್ರಸ್ತರ ಪುನರ್ವಸತಿ ಮತ್ತು ಪುನರ್‌ನಿರ್ಮಾಣ (R&R) ಕಾರ್ಯಗಳಿಗಾಗಿ ಬಿಡುಗಡೆಯಾದ ಮತ್ತು ವೆಚ್ಚವಾದ ಅನುದಾನದ ವಿವರಗಳನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ.<br><br>**(2) ಮಹದಾಯಿ (ಕಳಸಾ ಮತ್ತು ಬಂಡೂರಾ) ಜಲಾನಯನ ಯೋಜನೆ :**<br>ಮಾನ್ಯ ಮಹಾದಾಯಿ ನ್ಯಾಯಾಧೀಕರಣದ ತೀರ್ಪಿನನ್ವಯ Clause VIII ರಡಿ ಕರ್ನಾಟಕ ರಾಜ್ಯವು ಶಾಸನಬದ್ಧ ಅನುಮೋದನೆಗಳನ್ನು ಕೇಂದ್ರ ಸರ್ಕಾರದಿಂದ ಪಡೆದ ನಂತರವೇ ಕಳಸಾ ಹಾಗೂ ಬಂಡೂರಿ ನಾಲಾ ತಿರುವು ಯೋಜನೆಗಳನ್ನು ಕಾರ್ಯಗತಗೊಳಿಸಬಹುದೆಂದು ನಿಬಂಧನೆ ಇರುತ್ತದೆ.<br><br>**ಕೇಂದ್ರ ಜಲ ಆಯೋಗದ ತೀರುವಳಿ:** ಕಳಸಾ ಬಂಡೂರಿ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕೇಂದ್ರ ಜಲ ಆಯೋಗದಿಂದ ದಿನಾಂಕ:29.12.2022 ರಂದು ವಿವರವಾದ ಯೋಜನಾ ವರದಿಗಳಿಗೆ ಅನುಮೋದನೆ ಪಡೆಯಲಾಗಿದೆ.<br><br>**ಪರಿಸರ ಅನುಮತಿ:** ಇದು ಕುಡಿಯುವ ನೀರಿನ ಯೋಜನೆಯಾಗಿರುವುದರಿಂದ ಈ ಯೋಜನೆಗೆ ಪರಿಸರ ಅನುಮತಿ ಅಗತ್ಯವಿರುವುದಿಲ್ಲ. ಈ ಕುರಿತು ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ದಿನಾಂಕ:17.10.2019 ರಂದು ಸ್ಪಷ್ಟೀಕರಣ ಪತ್ರವನ್ನು ನೀಡಿರುತ್ತದೆ.<br><br>**ಅರಣ್ಯ ಮತ್ತು ವನ್ಯಜೀವಿ ತೀರುವಳಿ:**<br><br>I. **ಕಳಸಾ ನಾಲಾ ತಿರುವು ಯೋಜನೆ:**<br><br>• **ಅರಣ್ಯ ತೀರುವಳಿಗೆ** ಅಗತ್ಯ ವಿರುವ ಒಟ್ಟು ಅರಣ್ಯ ಪ್ರದೇಶ 26.925 ಹೆಕ್ಟೇರ್ ಅರಣ್ಯ ಪ್ರದೇಶ ತೆರವುಗೊಳಿಸುವ ಪ್ರಸ್ತಾವನೆಯನ್ನು ದಿನಾಂಕ: 23.06.2022 ರಂದು ಸಲ್ಲಿಸಿದ್ದು, ಈ ಕುರಿತು ಪ್ರಾದೇಶಿಕ ಉನ್ನತಾಧಿಕಾರ ಸಮಿತಿ, ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ, ಬೆಂಗಳೂರು ದಿನಾಂಕ: 20.01.2023 ರಂದು ನಡೆದ ಸಭೆಯ ಮೂಲಕ ಈಗಾಗಲೇ ತೀರುವಳಿಗಾಗಿ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಸುಮಾರು 10.685 ಹೆಕ್ಟೇರ್ ಪ್ರದೇಶವು ಟೈಗರ್ ಕಾರಿಡಾರ್ ಪ್ರದೇಶದಲ್ಲಿರುವ ಕಾರಣ ಕೇಂದ್ರ ವನ್ಯ ಜೀವಿ ಮಂಡಳಿಯಿಂದ (NBWL) ವನ್ಯ ಜೀವಿ ತೀರುವಳಿ ಪಡೆಯಲು ಅರ್ಜಿ ಸಲ್ಲಿಸುವಂತೆ ನಿರ್ದೇಶಿಸಿರುತ್ತದೆ. |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| | | • **ವನ್ಯಜೀವಿ ತೀರುವಳಿಗೆ** ಸಂಬಂಧಿಸಿದಂತೆ ದಿನಾಂಕ:23.06.2026 ರಂದು ಕೇಂದ್ರ ಅರಣ್ಯ ಮಂತ್ರಾಲಯವು ಪ್ರಸ್ತಾವನೆಯನ್ನು ಹಿಂದಿರುಗಿಸಿದ್ದು, ಪರಿವೇಶ್ ಪೋರ್ಟಲ್ ಮುಖಾಂತರ ನೀಡಿರುವ ಆಕ್ಷೇಪಣೆಗಳಿಗೆ ಕಾನೂನು ತಂಡದ ಸಲಹೆ/ಅಭಿಪ್ರಾಯ ಅವಶ್ಯವಿದ್ದು, ಸಮಾಲೋಚಿಸಿ ಪಾಲನಾ ವರದಿ ತಯಾರಿಸಲು ಕ್ರಮ ವಹಿಸಲಾಗುತ್ತಿದೆ.<br><br>**II. ಬಂಡೂರಾ ನಾಲಾ ತಿರುವು ಯೋಜನೆ:**<br><br>• **ಅರಣ್ಯ ತೀರುವಳಿಗೆ** ಸಂಬಂಧಿಸಿದಂತೆ ದಿನಾಂಕ:13.07.2026 ರಂದು ಕೇಂದ್ರ ಸರ್ಕಾರವು ನೀಡಿರುವ ಆಕ್ಷೇಪಣೆಗಳಿಗೆ ಕಾನೂನು ತಂಡದ ಸಲಹೆ/ಅಭಿಪ್ರಾಯ ಅವಶ್ಯವಿದ್ದು, ಸಮಾಲೋಚಿಸಿ ಪಾಲನಾ ವರದಿ ತಯಾರಿಸಲು ಕ್ರಮ ವಹಿಸಲಾಗುತ್ತಿದೆ.<br><br>ಈ ಯೋಜನೆಯನ್ನು ಶೀಘ್ರವಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಅಗತ್ಯ ತೀರುವಳಿ ಪಡೆಯಲು ನಿರಂತರವಾಗಿ ಕೇಂದ್ರ ಸರ್ಕಾರದೊಂದಿಗೆ ಅನುಸರಣೆ ಮಾಡಲಾಗುತ್ತಿದೆ.<br><br>ಮುಂದುವರೆದು, ಮಾನ್ಯ ಮುಖ್ಯಮಂತ್ರಿಯವರು ಖುದ್ದಾಗಿ ಮಾನ್ಯ ಪ್ರಧಾನಮಂತ್ರಿಗಳು, ಭಾರತ ಸರ್ಕಾರ ಹಾಗೂ ಮಾನ್ಯ ಕೇಂದ್ರ ಅರಣ್ಯ ಸಚಿವರನ್ನು ಭೇಟಿ ಮಾಡಿ ಶೀಘ್ರವಾಗಿ ಶಾಸನಬದ್ಧ ತೀರುವಳಿಗಳನ್ನು ನೀಡುವಂತೆ ಕೋರಲಾಗಿದೆ.<br><br>ಸಕ್ಷಮ ಪ್ರಾಧಿಕಾರಗಳ ಅನುಮೋದನೆ ಪಡೆದು, ಕಾಮಗಾರಿಗಳನ್ನು ಭೌತಿಕವಾಗಿ ಪ್ರಾರಂಭಿಸಲಾಗುವುದು.<br><br>**<u>(3) ಮಲಪ್ರಭಾ ನಾಲಾ ಆಧುನೀಕರಣ ಯೋಜನೆಗಳು:</u>**<br>ಮಲಪ್ರಭಾನಾಲಾ ಆಧುನೀಕರಣ ಯೋಜನೆಗಳಿಗೆ ಸಂಬಂಧಪಟ್ಟಂತೆ<br><br>I. **ERM-1 Package ಕಾಮಗಾರಿ**ಯಡಿ ಮುಖ್ಯಕಾಲುವೆ ಒಟ್ಟು ಉದ್ದ 138.85 ಕಿ.ಮೀ , ಹಾಗೂ ಹಂಚು ಕಾಲುವೆ ಉದ್ದ 371.11 ಕಿ.ಮೀ ಉದ್ದದ (ಸ್ಟ್ರಕ್ಚರ್ಸ್ ಒಳಗೊಂಡಂತೆ) ಆಧುನೀಕರಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದ್ದು, ಪ್ರಸ್ತುತ ಕಾಮಗಾರಿ 2019 ರಲ್ಲಿ ಪೂರ್ಣಗೊಳಿಸಲಾಗಿರುತ್ತದೆ ಹಾಗೂ **ERM-1 Non Package** ಕಾಮಗಾರಿಗಳ ಪೈಕಿ ಹಂಚು ಕಾಲುವೆಗಳು ಮುಕ್ತಾಯದ ಹಂತದಲ್ಲಿದ್ದು ಶೀಘ್ರವಾಗಿ ಪೂರ್ಣಗೊಳಿಸಲಾಗುವುದು.<br><br>II. **ERM-2 Package ಕಾಮಗಾರಿ**ಯಡಿ ಮುಖ್ಯ ಕಾಲುವೆ ಒಟ್ಟು ಉದ್ದ 8.16 ಕಿ.ಮೀ, ಹಂಚುಕಾಲುವೆ ಉದ್ದ 121.18 ಕಿ.ಮೀ ಹಾಗೂ ಉಪಹಂಚು ಕಾಲುವೆಗಳ ಒಟ್ಟು ಉದ್ದ 700.66 ಕಿ.ಮೀ ಉದ್ದದ (ಸ್ಟ್ರಕ್ಚರ್ಸ್ ಒಳಗೊಂಡಂತೆ) ಆಧುನೀಕರಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದ್ದು, ಪ್ರಸ್ತುತ ಕಾಮಗಾರಿ 2024 ರಲ್ಲಿ ಪೂರ್ಣಗೊಳಿಸಲಾಗಿರುತ್ತದೆ ಹಾಗೂ ಪ್ರಸ್ತುತ ಸಮರ್ಪಕವಾಗಿ ನೀರನ್ನು ಹರಿಸಲಾಗುತ್ತಿದೆ.<br><br>III. **ERM-3 Package ಕಾಮಗಾರಿ**ಯಡಿ ಮುಖ್ಯ ಕಾಲುವೆ ಒಟ್ಟು ಉದ್ದ 106.90 ಕಿ.ಮೀ , ಹಂಚು ಕಾಲುವೆ ಉದ್ದ 609.496 ಕಿ.ಮೀ |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
| --- | --- | --- |
| | | ಹಾಗೂ ಉಪ ಹಂಚು ಕಾಲುವೆಗಳ ಒಟ್ಟು ಉದ್ದ 1489.534 ಕಿ.ಮೀ ಉದ್ದದ ಬಾಕಿ ಉಳಿದ ಕಾಮಗಾರಿಗಳನ್ನು ERM-3 ಯೋಜನೆಯಲ್ಲಿ ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಕೃಷಿ ಸಿಂಚಯೀ ಯೋಜನೆ (PMKSY-AIBP) ಅಡಿಯಲ್ಲಿ ಕೈಗೆತ್ತಿಕೊಳ್ಳಲು ಕೇಂದ್ರ ಜಲ ಆಯೋಗದ (CWC) ನಿಯಮಾವಳಿಗಳನ್ವಯ ರೂ.3000 **ಕೋಟಿಗಳ ಮೊತ್ತಕ್ಕೆ** ವಿವರವಾದ ಯೋಜನಾವರದಿಯನ್ನು ತಯಾರಿಸಿ ದಿನಾಂಕ:20.02.2025 ರಂದು ಕಾರ್ಯದರ್ಶಿಗಳು ಜಲಶಕ್ತಿ ಸಚಿವಾಲಯ, ನವದೆಹಲಿ ಹಾಗೂ ಕೇಂದ್ರ ಜಲ ಆಯೋಗ, ನವದೆಹಲಿ ಇವರಿಗೆ ಅನುದಾನ ಕೋರಿ ಸಲ್ಲಿಸಲಾಗಿದೆ.<br><br>ಸದರಿ ವಿವರವಾದ ಯೋಜನಾ ವರದಿಗೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದ ನಂತರ ನಿಯಮಾನುಸಾರ ಕಾಮಗಾರಿಯನ್ನು ಕೈಗೊಳ್ಳಲು ಕ್ರಮ ವಹಿಸಲಾಗುವುದು. |
| ಈ) | ಉತ್ತರ ಕರ್ನಾಟಕದ ಒಣಭೂಮಿ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ಹಮ್ಮಿಕೊಳ್ಳಲಾಗಿರುವ ಪ್ರಮುಖ ಏತ ನೀರಾವರಿ ಯೋಜನೆಗಳು (Lift Irrigation Schemes) ಯಾವುವು; ಈ ಭಾಗದಲ್ಲಿ ಬಾಕಿ ಇರುವ ನೀರಾವರಿ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಸರ್ಕಾರ ಹಮ್ಮಿಕೊಂಡಿರುವ ವಿಶೇಷ ಕ್ರಿಯಾ ಯೋಜನೆ ಏನು? | ಉತ್ತರ ಕರ್ನಾಟಕದ ಪ್ರದೇಶಗಳಿಗೆ ನೀರಾವರಿ ಸೌಲಭ್ಯಕಲ್ಪಿಸುವ ಉದ್ದೇಶದಿಂದ ಹಮ್ಮಿಕೊಳ್ಳಲಾಗಿರುವ ಪ್ರಮುಖ ಏತ ನೀರಾವರಿ ಯೋಜನೆಗಳ (Lift Irrigation Schemes) ವಿವರಗಳನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ.<br><br>ಬಾಕಿ ಇರುವ ನೀರಾವರಿ ಯೋಜನೆಗಳನ್ನು ಅನುದಾನ ಲಭ್ಯತೆಯನುಸಾರ ಆದ್ಯತೆ ಮೇಲೆ ಕೈಗೆತ್ತಿಕೊಂಡು ಪೂರ್ಣಗೊಳಿಸಲು ನಿಯಮಾನುಸಾರ ಕ್ರಮವಹಿಸಲಾಗುವುದು. |

ಸಂಖ್ಯೆ:ಜಸಂಇ 77 ಡಬ್ಲ್ಯೂಬಿಎಂ 2026

**(ಎನ್. ಚಲುವರಾಯಸ್ವಾಮಿ)**
**ಜಲಸಂಪನ್ಮೂಲ ಸಚಿವರು**

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ನಿರಾಣಿ ಹಣಮಂತ್ ರುದ್ರಪ್ಪ**
**(ಪದವೀಧರರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ: 654 (784) ಕ್ಕೆ ಅನುಬಂಧ-1.**

ರೂ. ಕೋಟಿಗಳಲ್ಲಿ

| ಲೆಕ್ಕ ಶೀರ್ಷಿಕೆ | 2023-24 | | 2024-25 | | 2025-26 | |
|---|---|---|---|---|---|---|
| | ಸರ್ಕಾರದಿಂದ ಅನುದಾನ ಬಿಡುಗಡೆ | 2023–24ನೇ ಸಾಲಿಗೆ ಆಗಿರುವ ವೆಚ್ಚ | ಸರ್ಕಾರದಿಂದ ಅನುದಾನ ಬಿಡುಗಡೆ | 2024–25ನೇ ಸಾಲಿಗೆ ಆಗಿರುವ ವೆಚ್ಚ | ಸರ್ಕಾರದಿಂದ ಅನುದಾನ ಬಿಡುಗಡೆ | 2025–26ನೇ ಸಾಲಿಗೆ ಆಗಿರುವ ವೆಚ್ಚ |
| ಭೂಸ್ವಾಧೀನ, ಪು ಮತ್ತು ಪು 4701-80-190-3-01-145 | 1473.95 | 1469.63 | 1400.00 | 1401.54 | 1700.00 | 1699.00 |

**Note:** ವೆಚ್ಚ ಪ್ರಾರಂಭಿಕ ಶಿಲ್ಕು ಒಳಗೊಂಡಂತೆ

ಪ್ರಧಾನ ವ್ಯವಸ್ಥಾಪಕರು-ಆರ್ಥಿಕ
ಮತ್ತು ಮುಖ್ಯ ಹಣಕಾಸು ಅಧಿಕಾರಿ

(7)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ನಿರಾಣಿ ಹಣಮಂತ್ ರುದ್ರಪ್ಪ**
**(ಪದವೀಧರರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ: 654 (784) ಕ್ಕೆ ಅನುಬಂಧ-2.**

| ಕ್ರ. ಸಂ | ಏತ ನೀರಾವರಿ ಯೋಜನೆ ಹೆಸರು | ಪ್ರಸ್ತುತಹಂತ |
|---|---|---|
| | **ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ** | |
| 1 | ರಾಮಥಾಳ (ಮರೋಳ) ಏತ ನೀರಾವರಿ ಯೋಜನೆ | ಪೂರ್ಣಗೊಂಡಿದೆ |
| 2 | ನಂದವಾಡಗಿ ಏತ ನೀರಾವರಿ ಯೋಜನೆ | ಪ್ರಗತಿಯಲ್ಲಿರುತ್ತದೆ. |
| 3 | ಬೂದಿಹಾಳ ಪೀರಾಪುರ ಏತ ನೀರಾವರಿ ಯೋಜನೆ ಹಂತ-1 | ಪೂರ್ಣಗೊಂಡಿದೆ |
| 4 | ಕೆರೂರ ಏತ ನೀರಾವರಿ ಯೋಜನೆ | ಪ್ರಗತಿಯಲ್ಲಿರುತ್ತದೆ. |
| 5 | ಮುಳವಾಡ ಏತ ನೀರಾವರಿ ಯೋಜನೆ | ಪ್ರಗತಿಯಲ್ಲಿರುತ್ತದೆ. |
| 6 | ಚಿಮ್ಮಲಗಿ ಏತ ನೀರಾವರಿ ಯೋಜನೆ | ಪ್ರಗತಿಯಲ್ಲಿರುತ್ತದೆ. |
| 7 | ಇಂಡಿ ಏತ ನೀರಾವರಿ ಯೋಜನೆ (ಗುತ್ತಿಬಸವಣ್ಣ) | ಪ್ರಗತಿಯಲ್ಲಿರುತ್ತದೆ. |
| 8 | ರಾಂಪೂರ ಏತ ನೀರಾವರಿ ಯೋಜನೆ | ಪ್ರಗತಿಯಲ್ಲಿರುತ್ತದೆ. |
| 9 | ಮಲ್ಲಬಾದ್ ಏತ ನೀರಾವರಿ ಯೋಜನೆ | ಪ್ರಗತಿಯಲ್ಲಿರುತ್ತದೆ. |
| 10 | ಕೊಪ್ಪಳ ಏತ ನೀರಾವರಿ ಯೋಜನೆ | ಪ್ರಗತಿಯಲ್ಲಿರುತ್ತದೆ. |
| 11 | ಹೆರಕಲ್ ಏತ ನೀರಾವರಿ ಯೋಜನೆ | ಪ್ರಗತಿಯಲ್ಲಿರುತ್ತದೆ. |
| 12 | ನಾಗರಬೆಟ್ಟ ಏತ ನೀರಾವರಿ ಯೋಜನೆ | ಪ್ರಗತಿಯಲ್ಲಿರುತ್ತದೆ. |
| 13 | ಯಳ್ಳಿಗುತ್ತಿ ಏತ ನೀರಾವರಿ ಯೋಜನೆ | ಪೂರ್ಣಗೊಂಡಿದೆ. |
| 14 | ಹೆರಕಲ್ (ದಕ್ಷಿಣ) ಏತ ನೀರಾವರಿ ಯೋಜನೆ ವಿಸ್ತರಣೆ | ಪ್ರಗತಿಯಲ್ಲಿರುತ್ತದೆ. |
| 15 | ಭಗವತಿ ಏತ ನೀರಾವರಿ ಯೋಜನೆ | ಪ್ರಗತಿಯಲ್ಲಿರುತ್ತದೆ. |
| 16 | ಬೂದಿಹಾಳ ಪೀರಾಪುರ ಏತ ನೀರಾವರಿ ಯೋಜನೆ ಹಂತ-2 | ಪ್ರಗತಿಯಲ್ಲಿರುತ್ತದೆ. |
| 17 | ಹೊರ್ತಿ-ರೇವಣಸಿದ್ಧೇಶ್ವರ ಏತ ನೀರಾವರಿ ಯೋಜನೆ | ಪ್ರಗತಿಯಲ್ಲಿರುತ್ತದೆ. |
| 18 | ಸನ್ನತಿ ಏತ ನೀರಾವರಿ ಯೋಜನೆ | ಪ್ರಗತಿಯಲ್ಲಿರುತ್ತದೆ. |
| 19 | ಚಡಚಣ ಏತ ನೀರಾವರಿ ಯೋಜನೆ | ಪ್ರಗತಿಯಲ್ಲಿರುತ್ತದೆ. |
| 20 | ದೇವತ್ಕಲ್ ಏತ ನೀರಾವರಿ ಯೋಜನೆ | ಪ್ರಗತಿಯಲ್ಲಿರುತ್ತದೆ. |
| | **ಕರ್ನಾಟಕ ನೀರಾವರಿ ನಿಗಮ ನಿಯಮಿತ** | |
| 1 | ಬೆಣ್ಣಿಹಳ್ಳ ಕೊಳಚಿ ಕೊಣ್ಣೂರ ಏತ ನೀರಾವರಿ ಯೋಜನೆ (7 ಸಂಖ್ಯೆ) | ಪೂರ್ಣಗೊಂಡಿರುತ್ತದೆ |
| 2 | ಮದಗುಣಕಿ- ಹದ್ಲಿ-ಗಂಗಾಪೂರ ಏತ ನೀರಾವರಿ ಯೋಜನೆ | ಪೂರ್ಣಗೊಂಡಿರುತ್ತದೆ |
| 3 | ಅಮರಗೋಳ-ಗೊಬ್ಬರ ಗುಂಪಿ ಏತ ನೀರಾವರಿ ಯೋಜನೆ | ಪೂರ್ಣಗೊಂಡಿರುತ್ತದೆ |
| 4 | ಶಿಗ್ಗಾಂವ ಏತ ನೀರಾವರಿ ಯೋಜನೆ | ಪ್ರಗತಿಯಲ್ಲಿರುತ್ತದೆ. |
| 5 | ಸವಣೂರ ಏತ ನೀರಾವರಿ ಯೋಜನೆ | ಪ್ರಗತಿಯಲ್ಲಿರುತ್ತದೆ |
| 6 | ವೀರಭದ್ರೇಶ್ವರ ಏತ ನೀರಾವರಿ ಯೋಜನೆ | ಪ್ರಗತಿಯಲ್ಲಿರುತ್ತದೆ |

| ಕ್ರ. ಸಂ | ಏತ ನೀರಾವರಿ ಯೋಜನೆ ಹೆಸರು | ಪ್ರಸ್ತುತಹಂತ |
|---|---|---|
| 7 | ಸಾಲಾಪೂರ ಏತ ನೀರಾವರಿ ಯೋಜನೆ | ಪ್ರಗತಿಯಲ್ಲಿರುತ್ತದೆ |
| 8 | ಮೂಗನೂರ ಏತ ನೀರಾವರಿ ಯೋಜನೆ | ಪೂರ್ಣಗೊಂಡಿರುತ್ತದೆ |
| 9 | ದೇವಲಾಪೂರ ಏತ ನೀರಾವರಿ ಯೋಜನೆ | ಪೂರ್ಣಗೊಂಡಿರುತ್ತದೆ |
| 10 | ಬೂದಿಹಾಳ ಏತ ನೀರಾವರಿ ಯೋಜನೆ | ಏತ ನೀರಾವರಿ ಯೋಜನೆಗಳ ಪುನಃಶ್ಚೇತನ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಪೂರ್ಣಗೊಂಡಿದ್ದು, ಕಾಮಗಾರಿ ಪ್ರಾರಂಭಿಸಬೇಕಿದೆ. |
| 11 | ಕೆಂಗಾನೂರು ಏತ ನೀರಾವರಿ ಯೋಜನೆ | |
| 12 | ಜಾಲಿಕೊಪ್ಪ ಏತ ನೀರಾವರಿ ಯೋಜನೆ | |
| 13 | ಏಣಗಿ-ಹಿಟ್ಟಣಗಿ ಏತ ನೀರಾವರಿ ಯೋಜನೆ | |
| 14 | ಮಲ್ಲೂರ ಮಾಟೋಳ್ಳಿ ಏತ ನೀರಾವರಿ ಯೋಜನೆ | |
| 15 | ಹೊಸೂರ-ವಕ್ಕುಂದ ಏತ ನೀರಾವರಿ ಯೋಜನೆ | |
| 16 | ಬಡ್ಲಿ -ಕಾತ್ರಾಳ ಏತ ನೀರಾವರಿ ಯೋಜನೆ | |
| 17 | ಸಿಂಗಾರಕೊಪ್ಪ ಏತ ನೀರಾವರಿ ಯೋಜನೆ | |
| 18 | ರೇಣುಕಾ ಏತ ನೀರಾವರಿ ಯೋಜನೆ | ಪುನಃಶ್ಚೇತನ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. |
| 19 | ಯರಗಟ್ಟಿ ಏತ ನೀರಾವರಿ ಯೋಜನೆ | |
| 20 | ಕಟಮಳ್ಳಿ ಏತ ನೀರಾವರಿ ಯೋಜನೆ | ಪೂರ್ಣಗೊಂಡಿರುತ್ತದೆ |
| 21 | ಸುನ್ನಾಳ ಏತ ನೀರಾವರಿ ಯೋಜನೆ | ಪೂರ್ಣಗೊಂಡಿರುತ್ತದೆ |
| 22 | ಚಚಡಿ ಏತ ನೀರಾವರಿ ಯೋಜನೆ | ಹೆಡ್ ವರ್ಕ್, ಕಾಲುವೆ ಕಾಮಗಾರಿ ಪೂರ್ಣಗೊಂಡಿದ್ದು, ಹೊಲಗಾಲುವೆ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿವೆ |
| 23 | ಮುರಗೋಡ ಏತ ನೀರಾವರಿ ಯೋಜನೆ | ಹೆಡ್ ವರ್ಕ್, ಕಾಲುವೆ ಕಾಮಗಾರಿ ಪೂರ್ಣಗೊಂಡಿದ್ದು, ಹೊಲ ಗಾಲುವೆ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿವೆ. |
| 24 | ಗೋಡಚಿನಮಲ್ಕಿ ಏತ ನೀರಾವರಿ ಯೋಜನೆ | ಹೆಡ್ ವರ್ಕ್, ಕಾಲುವೆ ಕಾಮಗಾರಿ ಪೂರ್ಣಗೊಂಡಿದ್ದು, ಹೊಲಗಾಲುವೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕಾಗಿದೆ |
| 25 | ಮಾರ್ಕಂಡೇಯ ಏತ ನೀರಾವರಿ ಯೋಜನೆ | ಕಾಮಗಾರಿಯು ಪ್ರಗತಿಯಲ್ಲಿದೆ. |
| 26 | ಅಡವಿ ಸಿದ್ದೇಶ್ವರ & ಶಂಕರ ಲಿಂಗಏತ ನೀರಾವರಿ ಯೋಜನೆ | ಕಾಮಗಾರಿಯು ಪೂರ್ಣಗೊಂಡಿದೆ. |
| 27 | ಮಹಾಲಕ್ಷ್ಮೀ ಏತ ನೀರಾವರಿ ಯೋಜನೆ | ಕಾಮಗಾರಿಯು ಪ್ರಗತಿಯಲ್ಲಿದೆ. |
| 28 | ಕರಗಾಂವ ಏತ ನೀರಾವರಿ ಯೋಜನೆ | ಕಾಮಗಾರಿಯು ಪ್ರಗತಿಯಲ್ಲಿದೆ. |
| 29 | ಚನ್ನವೃಷಬೇಂಧ್ರ ಏತ ನೀರಾವರಿ ಯೋಜನೆ | ಕಾಮಗಾರಿಯು ಪ್ರಗತಿಯಲ್ಲಿದೆ. |
| 30 | ಸತ್ತಿಗೇರಿ ಏತ ನೀರಾವರಿ ಯೋಜನೆ | ಕಾಮಗಾರಿಯು ಪ್ರಗತಿಯಲ್ಲಿದೆ. |
| 31 | ಅನವಾಲ ಏತ ನೀರಾವರಿ ಯೋಜನೆ | ಕಾಮಗಾರಿಯು ಪ್ರಗತಿಯಲ್ಲಿದೆ. |
| 32 | ಶಿರೂರು ಏತ ನೀರಾವರಿ ಯೋಜನೆ | ಕಾಮಗಾರಿಯು ಪ್ರಗತಿಯಲ್ಲಿದೆ. |
| 33 | ಕುರಣಿ ಏತ ನೀರಾವರಿ ಯೋಜನೆ 1ನೇಹಂತ, ಇಂಗಳಗಿ | ಕಾಮಗಾರಿ ಪೂರ್ಣಗೊಂಡಿದೆ |

| ಕ್ರ. ಸಂ | ಏತ ನೀರಾವರಿ ಯೋಜನೆ ಹೆಸರು | ಪ್ರಸ್ತುತಹಂತ |
|---|---|---|
| 34 | ಕುರಣಿ ಏತ ನೀರಾವರಿ ಯೋಜನೆ 2 & 3ನೇಹಂತ, ಕುರಣಿವಾಡಿ | ಕಾಮಗಾರಿಪೂರ್ಣಗೊಂಡಿದೆ |
| 35 | ರುಸ್ತುಂಪೂರ ಏತ ನೀರಾವರಿ ಯೋಜನೆ 1 & 2ನೇ ಹಂತ, | ಕಾಮಗಾರಿ ಪೂರ್ಣಗೊಂಡಿದೆ |
| 36 | ದಡ್ಡಿನಾಗನೂರ ಏತ ನೀರಾವರಿ ಯೋಜನೆ 1 & 2ನೇ ಹಂತ, | ಕಾಮಗಾರಿ ಪೂರ್ಣಗೊಂಡಿದೆ |
| 37 | ಕೋಚರಿ ಏತ ನೀರಾವರಿ ಯೋಜನೆ | ಕಾಮಗಾರಿಪೂರ್ಣಗೊಂಡಿದೆ |
| 38 | ಹಿರಣ್ಯಕೇಶಿ ಏತ ನೀರಾವರಿ ಯೋಜನೆ | ಕಾಮಗಾರಿ ಪೂರ್ಣಗೊಂಡಿದೆ |
| 39 | ರಾಮೇಶ್ವರ ಏತ ನೀರಾವರಿ ಯೋಜನೆ | ಕಾಮಗಾರಿ ಪೂರ್ಣಗೊಂಡಿದೆ |
| 40 | ಕೊಟಬಾಗಿ ಏತ ನೀರಾವರಿ ಯೋಜನೆ | ಕಾಮಗಾರಿ ಪೂರ್ಣಗೊಂಡಿದೆ |
| 41 | ಕಬ್ಬೂರ ಏತ ನೀರಾವರಿ ಯೋಜನೆ | ಕಾಮಗಾರಿ ಪೂರ್ಣಗೊಂಡಿದೆ |
| 42 | ಮೇಳ್ಳಿಗೇರಿ-ಹಲಗಲಿ ಏತ ನೀರಾವರಿ ಯೋಜನೆ ಹಂತ-1 | ಕಾಮಗಾರಿಮುಕ್ತಾಯ ಹಂತದಲ್ಲಿರುತ್ತದೆ |
| 43 | ಮೇಳ್ಳಿಗೇರಿ-ಹಲಗಲಿ ಏತ ನೀರಾವರಿ ಯೋಜನೆ ಹಂತ-2 | ಕಾಮಗಾರಿಯು ಪ್ರಗತಿಯಲ್ಲಿದೆ |
| 44 | ಬಾವಲತ್ತಿ-ಕೋವಳ್ಳಿ ಏತ ನೀರಾವರಿ ಯೋಜನೆ | ಪುನರುಜ್ಜೀವನ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದ್ದು, ಯೋಜನೆಯು ಪ್ರತಿಶತ 50% ಕಾಮಗಾರಿ ಪೂರ್ಣಗೊಂಡಿರುತ್ತದೆ |
| 45 | ಹಲ್ಯಾಳ ಏತ ನೀರಾವರಿ ಯೋಜನೆ ಹಂತ-1 | ಕಾಮಗಾರಿ ಪೂರ್ಣಗೊಂಡಿದೆ. |
| 46 | ಹಲ್ಯಾಳ ಏತ ನೀರಾವರಿ ಯೋಜನೆ ಹಂತ-2 | ಕಾಮಗಾರಿ ಪೂರ್ಣಗೊಂಡಿದೆ. |
| 47 | ಕರಿಮಸೂತಿ ಏತ ನೀರಾವರಿ ಯೋಜನೆ ಹಂತ-1 | ಕಾಮಗಾರಿ ಪೂರ್ಣಗೊಂಡಿದೆ. |
| 48 | ಕರಿಮಸೂತಿ ಏತ ನೀರಾವರಿ ಯೋಜನೆ ಹಂತ-2 | ಕಾಮಗಾರಿ ಪೂರ್ಣಗೊಂಡಿದೆ. |
| 49 | ಐನಾಪೂರ ಏತ ನೀರಾವರಿ ಯೋಜನೆ ಹಂತ-1 | ಕಾಮಗಾರಿ ಪೂರ್ಣಗೊಂಡಿದೆ. |
| 50 | ಐನಾಪೂರ ಏತ ನೀರಾವರಿ ಯೋಜನೆ ಹಂತ-2 | ಕಾಮಗಾರಿ ಪೂರ್ಣಗೊಂಡಿದೆ. |
| 51 | ಸಾವಳಗಿ ತುಂಗಳ ಏತ ನೀರಾವರಿ ಯೋಜನೆ | ಕಾಮಗಾರಿ ಪೂರ್ಣಗೊಂಡಿದೆ. |
| 52 | ತುಬಚಿ-ಬಬಲೇಶ್ವರ ಏತ ನೀರಾವ ರಿಯೋಜನೆ | ಕಾಮಗಾರಿಯುಪೂರ್ಣಗೊಂಡಿದೆ. |
| 53 | ಬಸವೇಶ್ವರ ಕೆಂಪವಾಡ ಏತ ನೀರಾವರಿ ಯೋಜನೆ | ಕಾಮಗಾರಿಯು ಪ್ರಗತಿಯಲ್ಲಿದೆ |
| 54 | ಅಮ್ಮಾಜೇಶ್ವರಿ (ಕೊಟ್ಟಲಗಿ) ಏತ ನೀರಾವರಿ ಯೋಜನೆ | ಕಾಮಗಾರಿಯು ಪ್ರಗತಿಯಲ್ಲಿದೆ |
| 55 | ವೆಂಕಟೇಶ್ವರ ಏತ ನೀರಾವರಿ ಯೋಜನೆ | ಕಾಮಗಾರಿಯು ಪ್ರಗತಿಯಲ್ಲಿದೆ |
| 56 | ಬಸಾಪುರ ಏತ ನೀರಾವರಿ ಯೋಜನೆ | ಕಾಮಗಾರಿ ಪೂರ್ಣಗೊಂಡಿದೆ. |
| 57 | ಗುಡ್ಡದಮಲ್ಲಾಪುರ ಏತ ನೀರಾವರಿ ಯೋಜನೆ | ಕಾಮಗಾರಿ ಪೂರ್ಣಗೊಂಡಿದೆ. |
| 58 | ತಿಳುವಳ್ಳಿ ಏತ ನೀರಾವರಿ ಯೋಜನೆ | ಕಾಮಗಾರಿ ಪೂರ್ಣಗೊಂಡಿದೆ. |
| 59 | ಕಾರಂಜಾ ಏತ ನೀರಾವರಿ ಯೋಜನೆ | ಕಾಮಗಾರಿ ಪೂರ್ಣಗೊಂಡಿದೆ |
| 60 | ಅತಿವಾಳ ಏತ ನೀರಾವರಿ ಯೋಜನೆ | ಕಾಮಗಾರಿ ಪೂರ್ಣಗೊಂಡಿದೆ |
| 61 | ಮೆಹಕರ ಏತ ನೀರಾವರಿ ಯೋಜನೆ. (ಮೊದಲನೆ ಹಂತ) | ಕಾಮಗಾರಿ ಪ್ರಗತಿಯಲ್ಲಿದೆ |
| 62 | ಭೀಮಾ ಏತ ನೀರಾವರಿ ಯೋಜನೆ | ಕಾಮಗಾರಿ ಪೂರ್ಣಗೊಂಡಿದೆ |
| 63 | ಯಡ್ವಳ್ಳಿ ಏತ ನೀರಾವರಿ | ಕಾಮಗಾರಿ ಪ್ರಗತಿಯಲ್ಲಿದೆ |

| ಕ್ರ. ಸಂ | ಏತ ನೀರಾವರಿ ಯೋಜನೆ ಹೆಸರು | ಪ್ರಸ್ತುತಹಂತ |
|---|---|---|
| 64 | ತರನಳ್ಳಿ ಏತ ನೀರಾವರಿ ಯೋಜನೆ | ಕಾಮಗಾರಿ ಪ್ರಗತಿಯಲ್ಲಿದೆ |
| 65 | ಐನಾಪುರ ಏತ ನೀರಾವರಿ ಯೋಜನೆ. (ಮೊದಲನೆ ಹಂತ) | ಕಾಮಗಾರಿ ಪ್ರಗತಿಯಲ್ಲಿದೆ |
| 66 | ಅಳವಂಡಿಬೆಟಗೇರಿ ಏತ ನೀರಾವರಿ ಯೋಜನೆ (ಅಳವಂಡಿ) | ಕಾಮಗಾರಿ ಪ್ರಗತಿಯಲ್ಲಿದೆ |
| 67 | ಬಹದ್ದೂರು ಬಂಡಿ ಏತ ನೀರಾವರಿ ಯೋಜನೆ (ಬಹದ್ದೂರುಬಂಡಿ) | ಕಾಮಗಾರಿ ಪೂರ್ಣಗೊಂಡಿದೆ |
| 68 | ಸಿಂಗಟಾಲೂರು ಏತ ನೀರಾವರಿ ಯೋಜನೆ (ಮೊದಲನೇ ಹಂತ ಹಾಗೂ ಎರಡನೇ ಹಂತ) | ಕಾಮಗಾರಿ ಪೂರ್ಣಗೊಂಡಿದೆ |
| 69 | ಚಿಲವಾರ ಬಂಡಿಏತ ನೀರಾವರಿ ಯೋಜನೆಯಡಿ ಯೋಜನೆಯಡಿ ಕಾಲುವೆ ಮೂಲಕ ರೈತರಿಗೆ ನೀರಾವರಿ ಸೌಲಭ್ಯ ಒದಗಿಸುವ ಯೋಜನೆ | ಕಾಮಗಾರಿ ಪ್ರಗತಿಯಲ್ಲಿದೆ |
| 70 | ಹಮ್ಮಿಗಿ ಮುಂಡವಾಡ ಯೋಜನೆಯಡಿ ಕಾಲುವೆ ಮೂಲಕ ರೈತರಿಗೆ ನೀರಾವರಿ ಸೌಲಭ್ಯ ಒದಗಿಸುವ ಯೋಜನೆ | ಕಾಮಗಾರಿ ಪೂರ್ಣಗೊಂಡಿದೆ |
| 71 | ಇಟಗಿ ಸಾಸಲವಡ ಯೋಜನೆಯಡಿ ಕಾಲುವೆ ಮೂಲಕ ರೈತರಿಗೆ ನೀರಾವರಿ ಸೌಲಭ್ಯ ಒದಗಿಸುವ ಯೋಜನೆ | ಕಾಮಗಾರಿ ಪೂರ್ಣಗೊಂಡಿದೆ |
| 72 | ಆಲೂರು ಬನ್ನಿಕೊಪ್ಪ ಏತ ನೀರಾವರಿ ಯೋಜನೆಯಡಿ ಕಾಲುವೆ ಮೂಲಕ ರೈತರಿಗೆ ನೀರಾವರಿ ಸೌಲಭ್ಯ ಒದಗಿಸುವ ಯೋಜನೆ | ಭೌತಿಕವಾಗಿ ಪೂರ್ಣಗೊಂಡಿದೆ |
| 73 | ಶ್ರೀ.ಚನ್ನಬಸವೇಶ್ವರ ಏತ ನೀರಾವರಿ ಯೋಜನೆ | ಕಾಮಗಾರಿ ಪೂರ್ಣಗೊಂಡಿದೆ |

* * * * *